"ಮಧುರ ಮಕ್ಕಳೇ - ಸಂಗಮಯುಗವು ಬ್ರಾಹ್ಮಣರಿಗೆ ಕಲ್ಯಾಣಕಾರಿಯಾಗಿದೆ ಆದ್ದರಿಂದ ಸದಾ ನಶೆಯಲ್ಲಿರಬೇಕು, ಯಾವುದೇ ಮಾತಿನ ಚಿಂತೆಯನ್ನು ಮಾಡಬಾರದು"

ಪ್ರಶ್ನೆ: ಯಾರ ಸ್ಥಿತಿಯು ಚೆನ್ನಾಗಿರುತ್ತದೆ, ಅವರ ಗುರುತುಗಳು ಏನಾಗಿರುತ್ತದೆ?

ಉತ್ತರ: ಅವರಿಗೆ ಯಾವುದೇ ಮಾತಿನಲ್ಲಿ ಅಳು ಬರುವುದಿಲ್ಲ. ಬಾಡಿ ಹೋಗುವುದಿಲ್ಲ, ಚಿಂತೆ ಹಾಗೂ ಬೇಸರ ಮಾಡಿಕೊಳ್ಳುವುದಿಲ್ಲ. ಪ್ರತಿಯೊಂದು ದೃಶ್ಯವನ್ನು ಸಾಕ್ಷಿಯಾಗಿ ನೋಡುತ್ತಾರೆ. ಕೆಲವು ಬಾರಿ ಏಕೆ?, ಏನು? ಎನ್ನುವ ಪ್ರಶ್ನೆಯು ಬರುವುದಿಲ್ಲ. ಯಾರದೇ ನಾಮ-ರೂಪವನ್ನು ನೆನಪು ಮಾಡುವುದಿಲ್ಲ. ಒಬ್ಬ ತಂದೆಯ ನೆನಪಿನಲ್ಲಿ ಹರ್ಷಿತಮುಖವಾಗಿರುತ್ತಾರೆ.

ಗೀತೆ: ಓ ಮಾತಾ ನೀನೆ ಎಲ್ಲರ ಭಾಗ್ಯವಿದಾತ.....

ಓಂ ಶಾಂತಿ. ಮಧುರ ಮಕ್ಕಳಿಗೆ ಬೇಹದ್ದಿನ ತಂದೆಯ ನೆನಪಿನಲ್ಲಿರಿ ಎನ್ನುವ ಆದೇಶವಿದೆ. ಯಾರೆಲ್ಲಾ ಹೆಸರುವಾಸಿ ಮಕ್ಕಳು ಸೇವೆಯಲ್ಲಿ ಇದ್ದಾರೆಯೋ ಅವರಿಂದ ಈ ಜ್ಞಾನ ಮತ್ತು ಯೋಗವನ್ನು ಕೇಳಿರಿ. ಅವರೂ ಸಹ ಇದನ್ನೇ ಹೇಳುತ್ತಾರೆ ತಂದೆಯನ್ನು ನೆನಪು ಮಾಡಿ ಏಕೆಂದರೆ ಅವರಿಂದಲೇ ಆಸ್ತಿಯು ಸಿಗುತ್ತದೆ. ಮಮ್ಮಾರವರು ಅದನ್ನೇ ತಿಳಿಸುತ್ತಾರೆ, ಮಕ್ಕಳೂ ಸಹ ಇದನ್ನೇ ತಿಳಿಸುತ್ತಾರೆ. ನೀವು ಯಾವುದೇ ಚಿಂತೆಯನ್ನು ಮಾಡಬಾರದು ಏಕೆಂದರೆ ನೀವು ಮಕ್ಕಳು ಇಲ್ಲಿ ಶಿವತಂದೆಯ ನೆನಪಿನಲ್ಲಿ ಕುಳಿತಿದ್ದೀರಿ. ನೀವು ಯಾವುದೇ ಚಿಂತೆಯನ್ನು ಮಾಡಬಾರದು ಏಕೆಂದರೆ ನೀವು ಬೇಹದ್ದಿನ ತಂದೆಯಿಂದ ಈ ಆಸ್ತಿಯನ್ನು ತೆಗೆದುಕೊಳ್ಳುತ್ತಿದ್ದೀರಿ. ಇದರಲ್ಲಿ ಯಾರಾದರೂ ಶರೀರವನ್ನು ಬಿಟ್ಟಾಗ ನಾವು ಇದನ್ನು ನಾಟಕವೆಂದು ಹೇಳುತ್ತೇವೆ. ಕಲ್ಪದ ಮೊದಲೂ ಸಹ ಇದಾಗಿತ್ತು, ನಾಟಕದ ಗೆರೆಯ ಮೇಲೆ ನಡೆಯಬೇಕಲ್ಲವೆ. ಅದರಿಂದ ಯಾವುದೇ ಚಿಂತೆಯನ್ನು ಮಾಡಬಾರದು ಎಂದು ಮಮ್ಮಾ ಶರೀರವನ್ನು ಬಿಟ್ಟಾಗ ನಾವು ಇದನ್ನು ನಾಟಕವೆಂದು ಹೇಳುತ್ತೇವೆ. ಕಲ್ಪದ ಮೊದಲೂ ಸಹ ಇದಾಗಿತ್ತು, ನಾಟಕದ ಗೆರೆಯ ಮೇಲೆ ನಡೆಯಬೇಕಲ್ಲವೆ. ಅದರಿಂದ ಯಾವುದೇ ಚಿಂತೆಯನ್ನು ಮಾಡಬಾರದು ಎಂದು ಮಮ್ಮಾ ಶರೀರವನ್ನು ಬಿಟ್ಟರು. ನಾಳೆ ಇನ್ನೂ ಬೇರೆಯವರು ಶರೀರವನ್ನು ಬೀಡುತ್ತಾರೆ ಆದರೂ ಸಹ ತಂದೆಯು ಅವಶ್ಯವಾಗಿ ಮುರುಳಿ ನುಡಿಸುತ್ತಾರೆ. ತಂದೆಯೇ ನೀವು ಮಕ್ಕಳಿಗೆ ಹೊಸ-ಹೊಸ ವಿಷಯಗಳನ್ನು ತಿಳಿಸುತ್ತಾರೆ, ಅದರ ಅರ್ಥವನ್ನು ತಿಳಿಸುತ್ತಾರೆ ಮತ್ತು ಮಕ್ಕಳೇ, ತಂದೆಯನ್ನು ನೆನಪು ಮಾಡಿ. ಯಾವುದೇ ನಾಮ-ರೂಪದಲ್ಲಿ ಸಿಕ್ಕಿಹಾಕಿಕೊಳ್ಳಬೇಡಿ ಎಂದು ಎಲ್ಲರಿಗೂ ಹೇಳುತ್ತಾರೆ. ಇದು ಎಲ್ಲಾ ಮಕ್ಕಳಿಗೋಸ್ಕರ ಜ್ಞಾನವಾಗಿದೆ. ಮೊದಲು ನಡೆಯುತ್ತಾ ಹೋಗಿ, ಮುಂದೆ ಹೋಗುತ್ತಾ ಬಹಳ ಆಶ್ಚರ್ಯಕರವಾದಂತಹ ಮಾತುಗಳನ್ನು ನೋಡುತ್ತೀರಿ. ಈ ಸಮಯದಲ್ಲಿ ದುಃಖದ ಮಾತಾಗಿದೆ ಆದರೆ ಆ ದುಃಖದ ಬಗ್ಗೆ ನಮಗೆ ಯಾವುದೇ ಚಿಂತೆಯಿಲ್ಲ. ನೋಡಿ, ಈ ಸಾಕಾರ ತಂದೆ ಯಾವುದೇ ಚಿಂತೆಯಲ್ಲಿ ಇಲ್ಲ ಏಕೆಂದರೆ ನಾವು ತಂದೆಯನ್ನು ನೆನಪು ಮಾಡಬೇಕು. ನಾವು ತಂದೆಯಿಂದಲೇ ಆಸ್ತಿಯನ್ನು ತೆಗೆದುಕೊಳ್ಳಬೇಕೆಂದು ತಿಳಿದಿದೆ. ರಚನೆಯಿಂದ ಯಾವುದೇ ಆಸ್ತಿಯೂ ಸಿಗುವುದಿಲ್ಲವೆಂದು ತಿಳಿಸಲಾಗುತ್ತದೆ. ರಚನೆಗೆ ರಚೈತನಿಂದ ಆಸ್ತಿಯೂ ಸಿಗುತ್ತದೆ ಆದ್ದರಿಂದ ಯಾರೆಲ್ಲಾ ರಚನೆ ಇದ್ದಾರೆಯೋ ಅವರು ಒಬ್ಬ ರಚೈತನನ್ನೇ ನೆನಪು ಮಾಡಬೇಕು. ಏನೇ ಆಗಲಿ ತಿಳಿದುಕೊಳ್ಳಿ - ಯಾವುದೇ ಆರೀತಿಯಾದ ವಿಘ್ನ ಬಂದರು ಸಂಶಯದ ಯಾವುದೇ ಮಾತಿರಬಾರದು ಏಕೆಂದರೆ ಒಬ್ಬ ತಂದೆಯನ್ನು ನೆನಪು ಮಾಡಬೇಕು. ಇದರಲ್ಲಿ ಮಕ್ಕಳ ಕಲ್ಯಾಣವಿದೆ. ಒಂದುವೇಳೆ ಕೆಲವರು ಚೆನ್ನಾಗಿ ಸೇವೆಯನ್ನು ಮಾಡುತ್ತಾ ಮಾಡುತ್ತಾ ಹೊರಟುಹೋದರೆ ತಿಳಿದುಕೊಳ್ಳಿ -ಯಾರೆಲ್ಲಾ ಹೋಗುತ್ತಾರೆಯೋ ಅವರೆಲ್ಲಾ ಹೋಗಿ ಬೇರೆ ಕಡೆ ಪಾತ್ರವನ್ನು ಅಭಿನಯಿಸುತ್ತಾರೆ. ಒಂದಲ್ಲ ಒಂದು ಕಾರಣದಿಂದ ಇದೆಲ್ಲವೂ ಆಗುತ್ತದೆ ಏಕೆಂದರೆ ತಂದೆಯು ಕಲ್ಯಾಣಕಾರಿಯಾಗಿದ್ದಾರೆ ಮತ್ತು ಈ ಸಂಗಮಯುಗವು ಬ್ರಾಹ್ಮಣರಿಗೆ ಕಲ್ಯಾಣಾಕಾರಿಯಾಗಿದೆ. ಪ್ರತಿಯೊಂದು ಮಾತಿನಲ್ಲೂ ಕಲ್ಯಾಣವೆಂದು ತಿಳಿದು ನಶೆಯಲ್ಲಿರಬೇಕು ಏಕೆಂದರೆ ನಾವು ಈಶ್ವರೀಯ ಸಂತಾನರಾಗಿದ್ದೇವೆ. ಈಶ್ವರನಿಂದ ಆಸ್ತಿಯನ್ನು ತೆಗೆದುಕೊಳ್ಳುತ್ತಾ ಇದ್ದೇವೆ, ಆಸ್ತಿ ತೆಗೆದುಕೊಳ್ಳುತ್ತಾ-ತೆಗೆದುಕೊಳ್ಳುತ್ತಾ ಕೆಲವರು ಹೊರಟುಹೋಗುತ್ತಾರೆ. ಅವಶ್ಯವಾಗಿ ಅವರದು ಬೇರೆ ಪಾತ್ರವಿರುತ್ತದೆ. ಇದಕ್ಕಿಂತಲೂ ಹೆಚ್ಚು ಯಾವುದೋ ಕಾರ್ಯವನ್ನು ಮಾಡಬೇಕಾಗಿರುತ್ತದೆ.

ಆಹೋ ಸೌಭಾಗ್ಯ! ಕಲ್ಪದ ಹಿಂದಿನ ರೀತಿ ತಂದೆಗೆ ಸಹಯೋಗಿಗಳಾಗುವುದು ನಮ್ಮ ಪಾತ್ರವಾಗಿದೆ. ಸಹಯೋಗಿಗಳಾಗುತ್ತಾ ಆಗುತ್ತಾ ಸೇನಾಧಿಪತಿಯಂತವರೂ ಶರೀರವನ್ನು ಬಿಡುತ್ತಾರೆ. ನಾವು ತಿಳಿಯುತ್ತೇವೆ ನಾಟಕದನುಸಾರ ಇದೆಲ್ಲವೂ ಆಗುತ್ತದೆ, ಯಾರೇ ಹೋದರೂ ಏನಾಗುವುದು? ನಾವಂತೂ ಅವರಿಗಾಗಿ ಏನೂ ಮಾಡಬಾರದು. ನಮ್ಮದೆಲ್ಲವೂ ಸಹ ಗುಪ್ತವಾಗಿದೆ. ವಾಸ್ತವದಲ್ಲಿ ಸ್ಥಿತಿ ಚೆನ್ನಾಗಿರಬೇಕಾಗಿದೆ. ಯಾರಿಗೂ ಎಂದೂ ಕಣ್ಣೀರು ಬರಬಾರದು. ಮಮ್ಮಾ ಶರೀರವನ್ನು ಬಿಟ್ಟರೂ ಈಗ ಏನು ಮಾಡಬೇಕೆಂದು ತಿಳಿದುಕೊಳ್ಳಬೇಡಿ. ಕಣ್ಣೀರು ಬಂದರೆ ಅನುತ್ತೀರ್ಣರಾಗುತ್ತೀರಿ ಏಕೆಂದರೆ ತಂದೆಯು ಕುಳಿತಿದ್ದಾರೆ. ಅವರು ನಮ್ಮೆಲ್ಲರಿಗೂ ಆಸ್ತಿಯನ್ನು ಕೊಡುತ್ತಿದ್ದಾರೆ. ಅವರು ಅಮರರಾಗಿದ್ದಾರೆ. ಅವರಿಗೋಸ್ಕರ ಇಂದು ಕಣ್ಣೀರು ಸುರಿಸುವ

ಅವಶ್ಯಕತೆಯಿಲ್ಲ. ನಾವು ಸ್ವಯಂ ಖುಷಿಯಿಂದ ಶರೀರ ಬಿಡುವುದಕ್ಕೋಸ್ಕರ ಪುರುಷಾರ್ಥವನ್ನು ಮಾಡುತ್ತಿದ್ದೇವೆ. ಮಮ್ಮಾರವರೂ ಸಹ ಈ ಸಮಯದಲ್ಲಿ ಕಾರ್ಯಾರ್ಥವಾಗಿ ಹೋಗಬೇಕಿತ್ತು. ಇದೂ ಸಹ ನಾಟಕವಾಗಿದೆ. ಯಾರಾದರೂ ತಮ್ಮ ಸ್ಥಿತಿಯನುಸಾರ ಶರೀರ ಬಿಟ್ಟಾಗ ಅವರ ಕಲ್ಯಾಣವಿರುತ್ತದೆ. ಬಹಳ ಚೆನ್ನಾಗಿರುವಂತಹ ಮನೆಯಲ್ಲಿ ಜನ್ಮಪಡೆದು ಅಲ್ಲೂ ಸಹ ತುಂಬಾ ಖುಷಿಯನ್ನು ಕೊಡುತ್ತಾರೆ. ಚಿಕ್ಕ-ಚಿಕ್ಕ ಮಕ್ಕಳು ಎಲ್ಲರಿಗೂ ಖುಷಿಯನ್ನು ಕೊಡುತ್ತಾರೆ. ಎಲ್ಲರೂ ಅವರನ್ನು ಬಹಳಷ್ಟು ಮಹಿಮೆಯನ್ನು ಮಾಡುತ್ತಾರೆ ಅಂದಾಗ ಮಕ್ಕಳಿಗೆ ಡ್ರಾಮಾದ ಮೇಲೆ ಮತ್ತು ತಂದೆಯ ಮೇಲೆ ಆಧಾರವಿದೆ. ಏನೆಲ್ಲವೂ ಆಗುತ್ತದೆಯೋ ಕ್ಷಣ-ಕ್ಷಣವೂ ನಾಟಕದಲ್ಲಿ ದಾಖಲಾಗಿರುತ್ತದೆ ಎಂದು ತಿಳಿದು ಖುಷಿಯಲ್ಲಿ ಸದಾ ಹರ್ಷಿತವಾಗಿರಬೇಕು.

ನಾವು ಯಾರದೇ ಹೆಸರು-ರೂಪದಲ್ಲಿ ಸಿಕ್ಕಿಹಾಕಿಕೊಳ್ಳಬಾರದು. ಇದು ಶರೀರವಾಗಿದೆ. ನಾವಂತೂ ಹಿಂತಿರುಗಿ ಹೋಗಬೇಕಾಗಿದೆ ಎಂದು ತಿಳಿದಿದೆ. ಪ್ರತಿಯೊಬ್ಬರ ಪಾತ್ರವು ದಾಖಲಾಗಿರುತ್ತದೆ. ನಾವು ಅಳುತ್ತಿದ್ದಾಗ ಅಳುವುದರಿಂದ ಅವರ ಪಾತ್ರವೇನು ಬದಲಾಗುತ್ತದೆಯೇ. ಆದ್ದರಿಂದ ಮಕ್ಕಳು ಸಂಪೂರ್ಣ ಅಶರೀರಿ, ಶಾಂತ ಮತ್ತು ಹರ್ಷಿತಮುಖವಾಗಿರಬೇಕು. ಅಟಲ, ಅಖಂಡ ರಾಜ್ಯವನ್ನು ತೆಗೆದುಕೊಳ್ಳಬೇಕಾದರೆ ಈ ರೀತಿ ಆಗಲೇಬೇಕಾಗಿದೆ. ಏನಾದರೂ ಆಕಸ್ಮಿಕ ಘಟನೆ ಸಂಗಟಿಸಿದರೂ ಹೇಳುವಿರಿ ಡ್ರಾಮದ ಭವಿಷ್ಯ ಹೀಗಿತ್ತು ಎಂದು. ಇದರಲ್ಲಿ ಬೇಸರಪಡುವ ಮಾತಿಲ್ಲ. ಕಲ್ಪದ ಮೊದಲೂ ಈ ರೀತಿಯಾಗಿತ್ತು, ಆಕಸ್ಮಿಕ ಘಟನೆಗಳು ಆಗಲೇಬೇಕಾಗಿದೆ. ಮುಂದೆಹೋಗುತ್ತಾ ಹೋಗುತ್ತಾ ಭೂಕಂಪಗಳಾಗುತ್ತವೆ. ನಿಮ್ಮಲ್ಲಿ ಯಾರೂ ಸಾಯುವುದಿಲ್ಲ ಎಂದಲ್ಲ ಯಾರಾದರೂ ಸಾಯಬಹುದು. ಅದರಲ್ಲಿ ಆಕಸ್ಮಿಕಗಳೂ ನಡೆಯಬಹುದು ಆದ್ದರಿಂದ ಮಕ್ಕಳೇ ಸದಾಕಾಲ ನೆನಪು ಮಾಡಿ, ನಶೆಯಲ್ಲಿರಿ ಎಂದು ತಂದೆಯು ಹೇಳುತ್ತಾರೆ. ಇದರಲ್ಲಿ ಯಾರಿಗೆ ಯಾವ ಪಾತ್ರ ಸಿಕ್ಕಿದೆಯೋ ಅವರು ಮಾಡುತ್ತಿರುತ್ತಾರೆ. ಅದರಲ್ಲಿ ನಾವೇನು ಮಾಡುವುದು. ನಮ್ಮ ಜ್ಞಾನವೇ ಈ ರೀತಿಯಾಗಿದೆ - ಅಮ್ಮ ಸತ್ತರೂ ಹಲ್ವ (ಖುಷಿ) ತಿನ್ನಬೇಕು ಅಂದರೆ ಜ್ಞಾನರತ್ನಗಳನ್ನು ಕೊಡಬೇಕು. ತಿಳಿದುಕೊಳ್ಳಿ - ಬಾಬಾ ಹೇಳುತ್ತಾರೆ - ಈ ಬ್ರಹ್ಮಾತಂದೆಯು ಹೊರಟುಹೋಗುತ್ತಾರೆ.... ಅಂದಾಗ ನೀವು ಮಕ್ಕಳಿಗೆ ಜ್ಞಾನವಂತೂ ಸಿಕ್ಕಿದೆ ನಾವು ಶಿವಬಾಬಾರವರಿಂದ ಆಸ್ತಿಯನ್ನು ತೆಗೆದುಕೊಳ್ಳಬೇಕು. ಇವರಿಂದಂತೂ ತೆಗೆದುಕೊಳ್ಳುವಂತಿಲ್ಲ. ತಂದೆ ಹೇಳುತ್ತಾರೆ ನನ್ನ ಈ ಎಲ್ಲಾ ಮಕ್ಕಳು ಯಾರೆಲ್ಲಾ ನನ್ನಿಂದ ಆಸ್ತಿಯನ್ನು ತೆಗೆದುಕೊಂಡು ಅನ್ಯರಿಗೆ ಮಾರ್ಗವನ್ನು ತಿಳಿಸುತ್ತಾರೆ. ನೀವು ಮಕ್ಕಳು ಕುರುಡರಿಗೆ ಊರುಗೋಲಾಗಬೇಕು, ತಂದೆಯ ಪರಿಚಯವನ್ನು ಕೊಡಬೇಕು. ಪ್ರತಿಯೊಬ್ಬರ ಮೇಲೂ ದಯೆತೋರಬೇಕಾಗಿದೆ - ನಿಮ್ಮದು ಇದೇ ಪುರುಷಾರ್ಥವಾಗಿದೆ, ಮನುಷ್ಯರು ಪಾಪ ಬಹಳಷ್ಟು ದುಃಖಿಗಳಾಗಿದ್ದಾರೆ ಅವರಿಗೆ ಸುಖದ ಮಾರ್ಗವನ್ನು ತೋರಿಸೋಣ. ಈ ಪ್ರಪಂಚದಲ್ಲಿ ಕೇವಲ ಒಬ್ಬ ತಂದೆಯ ವಿನಃ ಬೇರೆ ಯಾರೂ ಸುಖದ ಮಾರ್ಗವನ್ನು ತೋರಿಸುವವರುಬೇರೆ ಯಾರೂಇಲ್ಲಾ. ಮುಕ್ತಿದಾತಾ, ದುಃಖಹರ್ತ-ಸುಖಕರ್ತ ಒಬ್ಬರೇ ಆಗಿದ್ದಾರೆ ಅವರನ್ನೇ ನೆನಪು ಮಾಡಬೇಕು.

ಏನಾದರೂ ಆಗಲಿ ಇಲ್ಲಿ ದುಃಖದ ಯಾವುದೇ ಮಾತಿಲ್ಲ. ಭಲೆ ನಿಮ್ಮ ಮಮ್ಮಾರವರೂ ಸಹ ಸೇವೆಯಲ್ಲಿ ಎಲ್ಲರಿಗಿಂತ ನಂಬರ್ವನ್ ಎನ್ನುವುದು ಗಾಯನ ಮಾಡಲಾಗಿದೆ ಎಂದು ನಿಮಗೆ ತಿಳಿದಿದೆ. ಅವರ ಕೈಯಲ್ಲಿ ವೀಣೆಯನ್ನು ತೋರಿಸುತ್ತಾರೆ ಏಕೆಂದರೆ ಜಗದಂಬಾ ಅಂದರೆ ಮಾತೇಶ್ವರಿ ಬಹಳ ಚೆನ್ನಾಗಿ ತಿಳಿಸುತ್ತಿದ್ದರು. ಅವರು ಶಿವತಂದೆಯನ್ನು ನೆನಪು ಮಾಡಿ ಎಂದು ಹೇಳುತ್ತಿದ್ದರು. ನನ್ನನ್ನು ನೆನಪು ಮಾಡಿ. ಮನ್ಮನಾಭವ, ಮಧ್ಯಾಜಿಭವ ಈ ಎರೆಡು ಅಕ್ಷರಗಳು ಪ್ರಸಿದ್ಧವಾಗಿದೆ ಬಾಕಿ ವಿಸ್ತಾರವಾಗಿದೆ.

ಅಂದರೆ ಯಾವುದೇ ಪರಿಸ್ಥಿಯಲ್ಲಿ, ಯಾರಿಗಾದರೂ ಯಾವುದೇ ಸಂಶಯ ಬಂದರೆ, ಇದು ಏನಾಯಿತು?, ಇದು ಏಕಾಯಿತು?.. ಅಂದರೆ ಇದರಿಂದ ತಮಗೆ ನಷ್ಟವನ್ನು ಮಾಡಿಕೊಳ್ಳುತ್ತಾರೆ. ನೀವು ಮಕ್ಕಳಿಗೆ ಯಾವುದೇ ಪರಿಸ್ಥಿಯಲ್ಲಿ ದುಃಖದ ಅನುಭವವು ಆಗಬಾರದು. ಭಲೇ ಕಾಯಿಲೆ ಇರಲಿ, ಏನಾದರು ಆಗಲಿ.... ಇದು ಕರ್ಮಭೋಗವಾಗಿದೆ. ಬಾಬಾರವರನ್ನು ಕೇಳುತ್ತಾರೆ- ಬಾಬಾ ಇದು ಏನು? ಎಂದು ಬಾಬಾ ಹೇಳುತ್ತಾರೆ- ಇದು ನಿಮ್ಮ ಕರ್ಮಭೋಗವೆಂದು. ಒಂದುವೇಳೆ ಯಾವುದಾದರು ಮಾತನ್ನು ಡ್ರಾಮಾದಲ್ಲಿ ಮೊದಲೇ ತಿಳಿಸುವುದಿಲ್ಲವೆಂದಾಗ ನಾನು ಹೇಗೆ ತಿಳಿಸಲಿ....! ಈ ತಂದೆಯೂ ಸಾಕ್ಷಿಯಾಗಿದ್ದು ನೋಡುತ್ತಾರೆ ಅಂದಾಗ ನೀವು ಮಕ್ಕಳು ಸಹ ಸಾಕ್ಷಿಯಾಗಿ ನೋಡಬೇಕು ಮತ್ತು ತಂದೆಯ ನೆನಪಿನ ನಶೆಯಲ್ಲಿರಬೇಕು - ನಾನು ಈಶ್ವರನ ಸಂತಾನನಾಗಿದ್ದೇನೆ, ಈಶ್ವರನ ಮಕ್ಕಳು, ಮೊಮ್ಮಕ್ಕಳಾಗಿದ್ದೇವೆ. ಈಶ್ವರನಿಂದಲೇ ಆಸ್ತಿಯನ್ನು ತೆಗೆದುಕೊಳ್ಳುತ್ತೇವೆ. ಮಮ್ಮಾರವರೂ ಸಹ ಈಶ್ವರನಿಂದ ಆಸ್ತಿಯನ್ನು ತೆಗೆದುಕೊಳ್ಳುತ್ತಾ - ತೆಗೆದುಕೊಳ್ಳುತ್ತಾ ಶರೀರವನ್ನು ಬಿಟ್ಟರು ಎಂದು ನಮಗೆ ತಿಳಿದಿದೆ. ನಾವು ಪ್ರತಿಯೊಬ್ಬರು ತಂದೆ ಮತ್ತು ಆಸ್ತಿಯನ್ನು ನೆನಪು ಮಾಡಬೇಕು. ಎಲ್ಲವೂ ಪುರುಷಾರ್ಥದ ಮೇಲೆ ಆಧಾರವಾಗಿದೆ. ನಾವು ಎಷ್ಟು ಓದುತ್ತೇವೆಯೋ ಅಷ್ಟೂ ಶ್ರೇಷ್ಠ ಪದವಿಯನ್ನು ಪಡೆದುಕೊಳ್ಳುತ್ತೇವೆಂದು ಮಕ್ಕಳಿಗೆ ಅನುಭವವಾಗುತ್ತದೆ. ಶ್ರೇಷ್ಠಾರಾದ ರಾಜಕುಮಾರರಾಗುತ್ತಾರೆ. ಸೂರ್ಯವಂಶಿ ರಾಜಕುಮಾರ, ರಾಜಕುಮಾರಿಯರು ಮತ್ತು ಚಂದ್ರವಂಶಿ ರಾಜಕುಮಾರ ಮತ್ತು ರಾಜಕುಮಾರಿಯರಿರುತ್ತಾರೆ. ಅಂದಾಗ ಮಕ್ಕಳಂತೂ ವಿದ್ಯೆಯನ್ನು ಓದಬೇಕು, ಏನಾದರು ಆಗಲಿ ವಿದ್ಯೆಯನ್ನು ಅವಶ್ಯಕವಾಗಿ ಓದಬೇಕು. ಯಾರಾದರು ತಂದೆ/ತಾಯಿ ಶರೀರ ಬಿಟ್ಟರೆ ಮಕ್ಕಳು ಓದುವುದನ್ನು ಬಿಡಬೇಕಿಲ್ಲ. ಅಂದಾಗ ನೀವು ಪ್ರತಿನಿತ್ಯ ವಿದ್ಯೆಯನ್ನು ಓದಬೇಕು. ನೀವು ಒಂದು ದಿನವು ವಿದ್ಯೆಯನ್ನು ಬಿಡಬಾರದು. ಸೇವೆಯನ್ನು

ಅವಶ್ಯಕವಾಗಿ ಮಾಡಬೇಕಾಗಿದೆ. ಪ್ರತಿಸಮಯದಲ್ಲೂ ಬುದ್ಧಿಯಲ್ಲಿ ಆ ಒಬ್ಬ ತಂದೆಯ ನೆನಪು ಇರಬೇಕು. ನಿಮಗೆ ಅವರೆ ವಿದ್ಯೆಯನ್ನು ಓದಿಸುತ್ತಾರೆ ಮತ್ತು ಅವರಿಂದಲೇ ಆಸ್ತಿಯನ್ನು ತೆಗೆದುಕೊಳ್ಳಬೇಕು. ಅವರಿಂದಲೇ ನಮ್ಮ ಬುದ್ಧಿಯ ಬೀಗವು ತೆರೆಯುತ್ತದೆ. ಇಡೀ ಬ್ರಹ್ಮಾಂಡ, ಸೂಕ್ಷ್ಮವತನ ಮತ್ತು ಸೃಷ್ಟಿಯ-ಆದಿ-ಮಧ್ಯ-ಅಂತ್ಯದ ಜ್ಞಾನವು ನಮ್ಮ ಬುದ್ಧಿಯಲ್ಲಿದೆ. ಈ ಜ್ಞಾನದಿಂದ ನಾವು ಚಕ್ರವರ್ತಿಗಳಾಗುತ್ತೇವೆ. ಈ ನಶೆಯಲ್ಲಿ, ಮೋಜಿನಲ್ಲಿ ಎಲ್ಲರಿಗೂ ಇದೇ ರೀತಿ ತಿಳಿಸಬೇಕಾಗಿದೆ ಏಕೆಂದರೆ ನೀವು ಮಕ್ಕಳೂ ಪಕ್ಕಾ ಬ್ರಾಹ್ಮಣರಾಗಿದ್ದೀರಿ, ನಿಮಗೆ ಯಾವುದೇ ಚಿಂತೆಯಿಲ್ಲ ಇದರಲ್ಲಿ ಚಿಂತೆ ಮಾಡುವ ಅವಶ್ಯಕತೆಯಿಲ್ಲ, ಬೇಸರ ಮಾಡಿಕೊಳ್ಳಬಾರದು ಆರೀತಿ ನಿಮ್ಮ ಸ್ಥಿತಿಯಿರಬೇಕು.

ಅಂತ್ಯದಲ್ಲಿ ನಮ್ಮದೇ ವಿಜಯವಾಗುತ್ತದೆ. ಅನೇಕರು ಬಂದು ತಮ್ಮ ಆಸ್ತಿಯನ್ನು ತೆಗೆದುಕೊಳ್ಳುತ್ತಾರೆಂದು ತಿಳಿದಿದೆ. ಏನಾದರು ಆಗಲಿ ಸೇವೆಯ ವೃದ್ಧಿಯಂತೂ ಆಗುತ್ತಿರುತ್ತದೆ. ಕೇವಲ ನಿಮ್ಮಲ್ಲಿ ದೈವಿ ನಡವಳಿಕೆ ಬೇಕಾಗಿದೆ. ಇದರಲ್ಲಿ ಯಾವುದೇ ಆಸುರಿ ಗುಣ ಇರಬಾರದು. ಅನ್ಯರ ಜೊತೆ ಹೊಡೆದಾಡುವುದು, ಜಗಳವಾಡುವುದು, ಅನ್ಯರ ಜೊತೆ ಕಟುವಾಗಿ ಮಾತನಾಡುವುದು ಅಥವಾ ಅಂತರಾಳದಲ್ಲಿ ಯಾವುದೇ ಆಸೆಯನ್ನಿಟ್ಟುಕೊಳ್ಳುವುದು, ಮೋಹ, ಲೋಭ, ಕ್ರೋಧ ಒಂದುವೇಳೆಯಿದ್ದಾಗ ಬಹಳ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಆದ್ದರಿಂದ ಯಾರಿಗೂ ದುಃಖವನ್ನು ಕೊಡಬಾರದು. ಎಲ್ಲರಿಗೂ ಸುಖದ ಮಾರ್ಗವನ್ನೇ ತೋರಿಸಬೇಕಾಗಿದೆ, ಯಾರಾದರು ಚಿಕ್ಕ ಮಕ್ಕಳಿದ್ದರೆ ಚಂಚಲತೆಯನ್ನು ಮಾಡಿದರೆ ಜೋರಾಗಿ ಹೊಡೆಯಬಾರದು. ಅವರನ್ನು ಪ್ರೀತಿಯಿಂದ ನಡೆಸಬೇಕಾಗಿದೆ, ಮನೆಯಲ್ಲಿ ಬಹಳ ಯುಕ್ತಿಯಿಂದ ನಡೆಯಬೇಕಾಗಿದೆ. ಕೆಲವರು ಇಲ್ಲಿ ಬಹಳ ಚೆನ್ನಾಗಿ ನಡೆದುಕೊಳ್ಳುತ್ತಾರೆ ಮನೆಗೆ ಹೋದ ನಂತರ ಅವರನ್ನು ಮಾಯೆಯು ಸೋಲಿಸುತ್ತದೆ. ಮಕ್ಕಳೇ, ಬಿರುಗಾಳಿಯೂ ಜೋರಾಗಿ ಬರುತ್ತದೆ. ದಿನ-ಪ್ರತಿದಿನ ಬಿರುಗಾಳಿಗಳು, ವಿಘ್ನಗಳು ಬೀಳುತ್ತಿರುತ್ತವೆ ಆದರೆ ನೀವು ಹೆದರಬಾರದಾಗಿದೆ. ತಂದೆ ತಿಳಿಸುತ್ತಾರೆ ಈ ನಮ್ಮ ರುದ್ರ ಜ್ಞಾನ ಯಜ್ಞದಲ್ಲಿ ಅಪಾರವಾದ ವಿಘ್ನಗಳು ಬೀಳುತ್ತವೆ ಏಕೆಂದರೆ ಇದು ಹೊಸ ಜ್ಞಾನವಾಗಿದೆ.

ಕೆಲವರು ಕೇಳುತ್ತಾರೆ - ನೀವು ಶಾಸ್ತ್ರವನ್ನು ಒಪ್ಪುತ್ತೀರಾ? ಹೌದು ಒಪ್ಪುತ್ತೇವೆ ಎಂದು ಹೇಳಿ. ಇವೆಲ್ಲವೂ ಭಕ್ತಿಮಾರ್ಗದ ಶಾಸ್ತ್ರಗಳಾಗಿವೆ ಆದರೆ ಇದು ಜ್ಞಾನಮಾರ್ಗವಾಗಿದೆ. ಜ್ಞಾನೇಶ್ವರ ತಂದೆಯೂ ಕೇವಲ ನನ್ನೊಬ್ಬನನ್ನೇ ನೆನಪು ಮಾಡಿ ಎಂದು ಹೇಳುತ್ತಾರೆ. ನಾವೂ ನಿಮಗೆ ಹೇಳುತ್ತೇವೆ ತಂದೆಯನ್ನು ನೆನಪು ಮಾಡಿ ಎಂದು. ಮಾಡಿ ಅಥವಾ ಬಿಡಿ ಅದು ನಿಮ್ಮ ಇಚ್ಛೆ. ಈಗ ನರಕವಾಗಿದೆ, ರಾವಣನ ರಾಜ್ಯವಾಗಿದೆ. ಈಗ ತಂದೆ ಮತ್ತು ಸ್ವರ್ಗವನ್ನು ನೆನಪು ಮಾಡಿ. ನೀವು ಗಂಗೆಯಲ್ಲಿ ಸ್ನಾನವನ್ನಂತೂ ಜನ್ಮ-ಜನ್ಮಾಂತರದಿಂದ ಮಾಡುತ್ತಾಬಂದಿರಿ ಆದರೂ ಸಹ ಪ್ರಪಂಚವು ಪತಿತವಾಗುತ್ತದೆ. ಈಗ ತಂದೆಯು ಕೇವಲ ನನ್ನೊಬ್ಬನನ್ನೇ ನೆನಪು ಮಾಡಿ ಎಂದು ಹೇಳುತ್ತಾರೆ. ಯಾರು ಇಲ್ಲಿಯವರಾಗಿರುತ್ತಾರೋ ಅವರ ಸಂಸ್ಕಾರವನ್ನು ನೋಡಿದಾಗಲೇ ತಿಳಿಯುತ್ತದೆ ಮತ್ತು ತಕ್ಷಣ ತಿಳಿದುಕೊಳ್ಳುತ್ತಾರೆ.

ನೀವೀಗ ಬೇಹದ್ದಿನ ಬುದ್ಧಿವಂತರಾಗಿದ್ದೀರಿ. ತಿಳುವಳಿಕೆ ಇರುವಂತಹವರಿಗೆ ಬುದ್ಧಿವಂತರೆಂದು ಹೇಳಲಾಗುತ್ತದೆ ಅಂದಾಗ ನೀವು ಆ ನಶೆಯಲ್ಲಿರಬೇಕಾಗಿದೆ ಬಾಕಿ ಚಿಂತೆಯ ಮಾತಿಲ್ಲ ನಾವೀಗ ಇದನ್ನು ತಿಳಿದುಕೊಂಡಿದ್ದೇವೆ ಡ್ರಾಮಾ ನಡೆಯುತ್ತಿದೆ. ನೀವು ಹೇಳುತ್ತೀರಿ - ವಾಹ್! ಮಮ್ಮಾ ಶರೀರ ಬಿಟ್ಟರು! ಆ ಪಾತ್ರಧಾರಿ ಮತ್ತೊಂದು ಪಾತ್ರವನ್ನಭಿಯಿಸಲು ಹೋಗಿದ್ದಾರೆ. ಇದರಲ್ಲಿ ತಬಿಬ್ಬಾಗುವ, ಅಳುವ, ದುಃಖಪಡುವ ಅವಶ್ಯಕತೆಯಿಲ್ಲ. ಅವರು ಶ್ರೇಷ್ಠವಾದ ಸೇವೆಯನ್ನು ಮಾಡುವುದಕ್ಕೋಸ್ಕರ ಹೋಗಿದ್ದಾರೆ. ನೀವು ದಿನ-ಪ್ರತಿದಿನ ಶ್ರೇಷ್ಠರಾಗುತ್ತೀರಿ. ಯಾರಾದರೂ ಶರೀರ ಬಿಟ್ಟರೆ ಅವರು ಶ್ರೇಷ್ಠವಾದ ಸೇವೆಯನ್ನು ಮಾಡಲು ಹೋಗಿದ್ದಾರೆ, ಇದಕ್ಕೋಸ್ಕರ ಮಕ್ಕಳಿಗೆ ಸ್ವಲ್ಪವೂ ದುಃಖವಾಗಬಾರದು. ಮಮ್ಮಾ ಏನು, ಎಲ್ಲರೂ ಹೋಗುತ್ತಾರೆ. ನಾವೂ ಸಹ ತಂದೆಯ ಬಳಿಗೆ ಹೋಗಬೇಕಾಗಿದೆ, ನಮ್ಮ ಕಾರ್ಯವು ತಂದೆಯೊಂದಿಗಿದೆ. ಎಲ್ಲರ ಕಾರ್ಯವು ತಂದೆಯೊಂದಿಗಿದೆ, ಮಮ್ಮಾರವರ ಕಾರ್ಯವೂ ತಂದೆಯೊಂದಿಗೆಯಿತ್ತು. ಈಗ ಅವರಿಂದ ಆ ಜ್ಞಾನವನ್ನು ಪಡೆದುಕೊಂಡು ಸೇವೆಯನ್ನು ಮಾಡಿ, ಪುನಃ ಮತ್ತೊಂದು ಪಾತ್ರವನ್ನಭಿಯಸಲು ಹೋಗಿದ್ದಾರೆ. ನಾವು ಸಾಕ್ಷಿಯಾಗಿ ನೋಡುತ್ತೇವೆ. ಮಮ್ಮಾ ಶರೀರ ಬಿಟ್ಟರು, ಇಂತಹವರು ಶರೀರ ಬಿಟ್ಟರು, ಇವರು ಹೊರಟುಹೋದರು ಎಂದಲ್ಲ.... ಅರೇ ಆತ್ಮವಂತೂ ಸೇವೆಯನ್ನು ಮಾಡಲು ಹೋಗಿದೆ ಆದರೆ ಶರೀರವಂತೂ ಮಣ್ಣಿನಲ್ಲಿ ಸೇರುತ್ತದೆ ಆದ್ದರಿಂದ ಎಂದೂ ಮಕ್ಕಳಿಗೆ ಯಾವುದೇ ಪ್ರಕಾರದ ಚಿಂತೆಯಿರಬಾರದು. ಹೌದು ಇದಂತೂ ಸತ್ಯವಾಗಿದೆ. ಇವರು ಬ್ರಹ್ಮಾತಂದೆಯ ವಿದ್ಯಾರ್ಥಿಯಾಗಿದ್ದರು, ಇವರು ಬಹಳ ಒಳ್ಳೆಯವರಾಗಿದ್ದರು, ಚೆನ್ನಾಗಿ ತಿಳಿಸುತ್ತಿದ್ದರು ಎಂದು ಗಾಯನ ಮಾಡಲಾಗಿದೆ. ಒಂದುವೇಳೆ ಯಾವುದಾದರೂ ಪ್ರಕಾರದ ಸಂಶಯ ಬಂದಾಗ ಅಲ್ಲಿಗೆ ಮುಗಿಯಿತು, ಪದವಿಯಿಂದ ಭ್ರಷ್ಟರಾಗುತ್ತಾರೆ ಆದ್ದರಿಂದ ತಂದೆಯ ಮಕ್ಕಳಿಗೆ ತಿಳಿಸುತ್ತಿರುತ್ತಾರೆ - ಮಕ್ಕಳೇ, ಯಾವುದೇ ಪ್ರಕಾರದ ಚಿಂತೆ ಮಾಡಬೇಡಿ, ಯಾವ ಸೂಚನೆ ಸಿಗುತ್ತದೆಯೋ ಅದನ್ನು ಕಾರ್ಯರೂಪದಲ್ಲಿ ತರುತ್ತಾಹೋಗಿ. ಈ ರೀತಿ ತಿಳಿಯಬೇಡಿ. ಇದು ಏಕೆ ಹೀಗಾಯಿತು? ಈ ಚಿಂತೆ ಯಾರಿಗಿರುತ್ತದೆಯೆಂದರೆ ಯಾರು ತಂದೆಯನ್ನು ಮತ್ತು ಜ್ಞಾನವನ್ನು ಯಾರು ಮರೆಯುತ್ತಾರೋ ಅವರಿಗೆ. ನೀವು ಮಕ್ಕಳೆಲ್ಲಾ ಜ್ಞಾನಸ್ವರೂಪರಾಗಿರುವಿರಿ. ಯಾರಲ್ಲಿ ಯಾವ ಪಾತ್ರವಿದೆಯೋ, ಅದರಲ್ಲಿ ನಾವೇನೂ ಮಾಡಲು ಸಾಧ್ಯ?.

ಒಳ್ಳೆಯದು. ರಾತ್ರಿಯಲ್ಲಿ ಎಲ್ಲರೂ ನೆನಪಿನಲ್ಲಿ ಕುಳಿತಿದ್ದೀರಿ ಒಳ್ಳೆಯ ಸಂಪಾದನೆಯಾಯಿತು. ತಂದೆಯು ಇಲ್ಲಿ ಬಂದು ಮಕ್ಕಳನ್ನು

ನೋಡುತ್ತಾರೆ ಏಕೆಂದರೆ ಇದು ಹೂತೋಟವಾಗುತ್ತಿದೆ ಎಂದು ಖುಷಿಯಾಗುತ್ತದೆ. ಈಗ ಬ್ರಾಹ್ಮಣರಾಗಿದ್ದೀರಿ ಅದರ ನಂತರ ದೇವಿ-ದೇವತೆಗಳ ತೋಟವಾಗುತ್ತದೆ. ಈಗ ಎಲ್ಲರೂ ಪುರುಷಾರ್ಥಿಗಳಾಗಿದ್ದಾರೆ. ಒಳ್ಳೆಯ ಹೂವಾಗುವ ಪ್ರಯತ್ನವನ್ನು ಮಾಡಿ. ಮುಳ್ಳಿನಿಂದ ಹೂವಾಗಿ ಪ್ರತ್ಯಕ್ಷ ಮಾಡಿ. ಆದರೆ ನೀವಿಲ್ಲಿ ಸ್ಥಿರವಾಗಿ ಕುಳಿತುಕೊಳ್ಳಬೇಕಾಗಿದೆ. ಬಾಬಾ ನೋಡಿ ನಾವು ಮಕ್ಕಳನ್ನು ಎಷ್ಟೊಂದು ಪಕ್ಕಾ ಮಾಡುತ್ತಿದ್ದಾರೆ. ಬಾಬಾರವರ ಆಜ್ಞೆಯಾಗಿದೆ ನನ್ನನ್ನು ನೆನಪು ಮಾಡಿ ಎಂದು. ಯಾರಾದರೂ ಅಳುತ್ತಿದ್ದಾಗ ತಂದೆಯು ಹೇಳುತ್ತಾರೆ - ಯಾರು ಅಳುತ್ತಾರೆಯೋ ಅವರು ಕಳೆದುಕೊಳ್ಳುತ್ತಾರೆ. ಬಾಬಾ ನೋಡುತ್ತಿರುತ್ತಾರೆ - ಯಾರೂ ಬಾಡಿಹೋಗಿರುವ ಹೂವಿಲ್ಲವೇ? ಇಲ್ಲ. ಎಲ್ಲರೂ ಮಹಾವೀರರಾಗಿದ್ದೀರಿ. ಈ ರೀತಿ ವಿಘ್ನಗಳು ಬರುತ್ತಲೇ ಇರುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ತಮ್ಮಲ್ಲಿ ದೈವೀ ನಡುವಳಿಕೆಯಿರಬೇಕಾಗಿದೆ. ಎಂದೂ ಜಗಳ, ಹೊಡೆದಾಟ,ಗುದ್ದಾಟ ಮಾಡಬಾರದು, ಕಹಿಮಾತುಗಳನ್ನು ಮಾತನಾಡಬಾರದು ಎಲ್ಲರಿಗೂ ಸುಖದ ಮಾರ್ಗವನ್ನು ತೋರಿಸಬೇಕಾಗಿದೆ.

2. ಯಾವುದೇ ವಿಘ್ನದಲ್ಲಿ ಸಂಶಯ ಬರಬಾರದಾಗಿದೆ. ನಾಟಕದ ನಿಶ್ಚಿತ ಭವಿಷ್ಯವನ್ನು ತಿಳಿದು ನಶೆಯಲ್ಲಿರಬೇಕಾಗಿದೆ ಚಿಂತೆ ಮಾಡಬಾಡಬಾರದಾಗಿದೆ.

ವರದಾನ: ಸತ್ಯ ಹೃದಯದಿಂದ ತಂದೆಯನ್ನು ರಾಜಿ ಮಾಡುವ ಮತ್ತು ಸದಾ ರಾಜಿಯಾಗಿರುವಂತಹ ರಾಜಯುಕ್ತ ಭವ.

ಯಾವ ಮಕ್ಕಳು ಸತ್ಯ ಹೃದಯದಿಂದ ತಂದೆಯನ್ನು ರಾಜಿ ಮಾಡುತ್ತಾರೆ, ಬಾಪ್ದಾದಾ ಅವರಿಗೆ ಸ್ವಯಂನ ಸಂಸ್ಕಾರಗಳಿಂದ, ಸಂಘಟನೆಯಿಂದ ಸದಾ ರಾಜಿ ಅರ್ಥಾತ್ ರಾಜಯುಕ್ತರಾಗಿರುವ ವರದಾನ ಕೊಡುತ್ತಾರೆ. ಸ್ವಯಂನ ಅಥವಾ ಒಬ್ಬೊಬ್ಬರ ಸಂಸ್ಕಾರಗಳ ರಹಸ್ಯವನ್ನು ಅರಿಯುವುದು, ಪರಿಸ್ಥಿತಿಗಳನ್ನು ತಿಳಿಯುವುದು, ಇದೇ ರಾಜಯುಕ್ತ ಸ್ಥಿತಿಯಾಗಿದೆ. ಸತ್ಯ ಹೃದಯದಿಂದ ತಂದೆಗೆ ತಮ್ಮ ಚಾರ್ಟ್ ಕೊಡುವಂತಹ ಅಥವಾ ಸ್ನೇಹದಿಂದ ಆತ್ಮೀಯ ವಾರ್ತಾಲಾಪ ಮಾಡುವುದರಿಂದ ಸದಾ ಸಮೀಪತೆಯ ಅನುಭವವಾಗುವುದು ಮತ್ತು ಹಳೆಯ ಖಾತೆ ಸಮಾಪ್ತಿಯಾಗಿ ಬಿಡುವುದು.

ಸ್ಲೋಗನ್: ಸತ್ಯ ಹೃದಯದಿಂದ ದಾತಾ, ವರದಾತನನ್ನು ರಾಜಿ ಮಾಡುವಂತಹವರೇ ಆತ್ಮೀಯ ಮೋಜಿನಲ್ಲಿರುತ್ತಾರೆ.